ಅ) ಧಾರವಾಡ ಜಿಲ್ಲೆಯಲ್ಲಿ ಒಟ್ಟು 153 ಪದವಿಪೂರ್ವ ಕಾಲೇಜುಗಳಿವೆ.

ಆ) ಅನುದಾನಿತ ಪದವಿಪೂರ್ವ ಕಾಲೇಜುಗಳು - 69

ಸರ್ಕಾರಿ ಪದವಿಪೂರ್ವ ಕಾಲೇಜುಗಳು - 29

ಇ) ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ ಸ್ಟಾಪಿಂಗ್ ಪ್ಯಾಟರ್ನ್ ಪ್ರಕಾರ ತುಂಬಿದ ಉಪನ್ಯಾಸಕರ ಹುದ್ದೆಗಳನ್ನು ಅನುಮೋದಿಸಲಾಗುತ್ತಿದೆ. ಶಿಕ್ಷಕೇತರ ಸಿಬ್ಬಂದಿಯನ್ನು ಸರ್ಕಾರವು ನೀಡಿದ ಆದೇಶ ಸಂಖ್ಯೆ:ಇಡಿ 2 ಎಸ್‌ಇಪಿ 94 ದಿನಾಂಕ:31-8-94 ಮತ್ತು 24-6-96ರನ್ವಯ ತುಂಬಲು ಕ್ರಮ ಕೈಗೊಳ್ಳಲಾಗಿದೆ. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು (864) ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ. ಆಯ್ಕೆಯಾದ ಉಪನ್ಯಾಸಕರುಗಳ ಪಟ್ಟಿಯು ಇಲಾಖೆಗೆ ಬಂದ ತಕ್ಷಣ ಖಾಲಿಯಿರುವ ಹುದ್ದೆಗಳಿಗೆ ಅವರುಗಳನ್ನು ನೇಮಿಸಲಾಗುವುದು.

ಈ) (ಸಿ)ಗೆ ಉತ್ತರಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ಧಾರವಾಡ ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳ ಭರ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 450 (645)

ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿನ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರುಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಆ) ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಇ) ವೈದ್ಯರುಗಳ ಕೊರತೆ ನೀಗಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಡಾ॥ ಹೆಚ್.ಪಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಧಾರವಾಡ ಜಿಲ್ಲೆಯಲ್ಲಿ 68 ವೈದ್ಯರ ಹುದ್ದೆ ಖಾಲಿ ಇವೆ. ತಾಲ್ಲೂಕುವಾರು ಹುದ್ದೆ ವಿವರ ಹಿಂದೆ ಲಗತ್ತಿಸಿದೆ.

ಆ) ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬಂದ ವೈದ್ಯರಿಂದ, ಗುತ್ತಿಗೆ ಆಧಾರದ ವೈದ್ಯರಿಂದ ಮತ್ತು ಲೋಕಸೇವಾ ಆಯೋಗದಿಂದ ಆಯ್ಕೆಯಾದ ವೈದ್ಯರಿಂದ ಈ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.

ಇ) ಲೋಕಸೇವಾ ಆಯೋಗದಿಂದ ಈಗಾಗಲೇ ವೈದ್ಯರನ್ನು ಸಂದರ್ಶನಕ್ಕೆ ಕರೆದಿದ್ದು ಸ್ನಾತಕೋತ್ತರ ವೈದ್ಯರಿಂದ ಮತ್ತು ಗುತ್ತಿಗೆ ಆಧಾರದ ವೈದ್ಯರಿಂದ ಖಾಲಿ ಹುದ್ದೆಗಳನ್ನು

ತುಂಬಿ ವೈದ್ಯರ ಕೊರತೆಯನ್ನು ನೀಗಿಸಲಾಗುವುದು.

ಧಾರವಾಡ ಜಿಲ್ಲೆಯ ವೈದ್ಯರು ಖಾಲಿ ಹುದ್ದೆ ವಿವರ ತಾಲ್ಲೂಕುವಾರು

ದಿನಾಂಕ 2-7-96ರಲ್ಲಿದ್ದಂತೆ

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಸಂಸ್ಥೆಯ ಹೆಸರು	ಖಾಲಿ ಇರುವ ಹುದ್ದೆಯ ಸಂಖ್ಯೆ	
1.	ಧಾರವಾಡ	ಜಿಲ್ಲಾ ಆಸ್ಪತ್ರೆ ಕಛೇರಿ, ಎಲ್‌ಸಿಡಿಆರ್	5	
		ಜಿಲ್ಲಾ ಪ್ರಯೋಗಾಲಯ	1	8
		ಪ್ರಾ.ಆ ಕೇಂದ್ರ, ಅಳ್ನಾವರ	2	
2.	ಮುಂಡರಗಿ	ಪ್ರ.ಆ ಕೇಂದ್ರ, ಹಿರೇವಡ್ಡಟ್ಟಿ	1	
		'' ಬಾಗೇವಾಡಿ	1	
		'' ಜಂತ್ಲಿಶಿರೂರು	1	3
3.	ಕಲಘಟಗಿ	'' ಗಳಗಿದುಲಕೊಪ್ಪ	1	
		'' ಗಂಜಿಗಟ್ಟಿ	1	3
		ಗ್ರಾ.ಆ.ತ.ಉ.ಕೇ. ದೇವಿಕೊಪ್ಪ	1	
4.	ನರಗುಂದ	ಪ್ರಾ.ಆ ಕೇಂದ್ರ, ಜಗಾಪುರ	1	2
		ಸಮುದಾಯ ಆರೋಗ್ಯ ಕೇಂದ್ರ, ನರಗುಂದ.	1	
5.	ರೋಣ	ಸಾರ್ವಜನಿಕ ಆಸ್ಪತ್ರೆ, ರೋಣ	2	
		ಪ್ರಾ.ಆಕೇ, ಶಾಂತಗೇರಿ	1	4
		'' ಬೆಳವಣಿಕೆ	1	
6.	ಸವಣೂರು	'' ಹತ್ತಿಮತ್ತೂರು	1	
		'' ಯಲವಿಗಿ	1	2
7.	ಹಾನಗಲ್	'' ಬೈಚವಳ್ಳಿ	1	
		'' ಶಾಡಗುಪ್ಪಿ	1	3

		ಸ.ಪ್ರಾ.ಕೇ.	ಹಾನಗಲ್	1	
8.	ಶಿರಹಟ್ಟಿ	ಪ್ರಾ.ಆಕೇ	ಸೂರಣಗಿ	1	
		ಸ.ಆ.ಕೇ,	ಶಿರಹಟ್ಟಿ	1	3
9.	ಹಾವೇರಿ	''	ದೇವಿಹೊಸೂರು	1	
10.	ಹಿರೇಕೆರೂರು	''	ಚಿಕರೂರು	1	
		''	ಕುಡಪಲಿ	1	4
		ಸ.ಆ.ಕೇ.	ಹಿರೇಕೆರೂರು	2	
11.	ಬ್ಯಾಡಗಿ	''	ಬ್ಯಾಡಗಿ	2	2
12.	ರಾಣಿಬೆನ್ನೂರು	ಪ್ರಾ.ಆಕೇ	ಹಲಗೇರಿ	1	3
		''	ಕುಪ್ಪೇಲೂರು	2	
13.	ಗದಗ	ಪ್ರಾ.ಆಕೇ	ಮುಳಗುಂದ	1	1
				38	

ವಿಷಯ:- ರಾಜ್ಯದಲ್ಲಿನ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಕಡ್ಡಾಯ ಆಜ್ಞೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 451 (934)

ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಪ್ರಾಥಮಿಕ ಶಾಲೆಗಳಲ್ಲಿ 4ನೇ ತರಗತಿಯವರೆಗೆ ಕನ್ನಡ ಮಾಧ್ಯಮ ಇರಬೇಕೆಂಬ ಸರಕಾರಿ ಆಜ್ಞೆ ಜಾರಿಯಲ್ಲಿ ಇದೆಯೇ; ಇದ್ದಲ್ಲಿ ಅದನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆಯೇ; ಇಲ್ಲವಾದಲ್ಲಿ ಕಾರಣಗಳೇನು;

ಆ) ಸದರಿ ಆಜ್ಞೆಯನ್ನು ಪಾಲಿಸದವರ ಮೇಲೆ ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ರಾಜ್ಯದಲ್ಲಿನ ಎಲ್ಲ ಪ್ರಾಥಮಿಕ ಶಾಳೆಗಳಲ್ಲಿ 1ರಿಂದ 4ನೇ ತರಗತಿಯವರೆಗೆ ಕನ್ನಡ ಅಥವಾ ಮಕ್ಕಳ ಮಾತೃಭಾಷೆಯಲ್ಲಿ ಬೋಧಿಸಬೇಕೆಂಬುದು ಸರ್ಕಾರದ ಭಾಷಾ ನೀತಿಯಾಗಿರುತ್ತದೆ. ಅದರಂತೆ ಎಲ್ಲ ಶಾಲೆಗಳಲ್ಲಿ ಈ ನೀತಿಯನ್ನು ಪಾಲಿಸಲು ಕಟ್ಟುನಿಟ್ಟಾದ ಸೂಚನೆಗಳನ್ನು ಇಲಾಖಾಧಿಕಾರಿಗಳಿಗೆ ನೀಡಲಾಗಿದೆ.